5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ನೇತ್ರಾವತಿ ನೀರನ್ನು ಹೇಮಾವತಿ ನೀರಿಗೆ ವರ್ಗಾಯಿಸಿ ನೀರನ್ನು ಸರಬರಾಜು ಮಾಡುತ್ತೇವೆ ಎಂದು ನೀರಾವರಿ ಮಂತ್ರಿಗಳು ಹೇಳಿರುವ ವಿಚಾರ

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಒಂದು ವಿಷಯ ಕ್ಲಾರಿಫಿಕೇಷನ್ ಆಗಬೇಕಾಗಿರುವುದರಿಂದ ಇವತ್ತು ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರಲ್ಲಿ ಪರ್ಮಿಷನ್ ತೆಗೆದುಕೊಂಡಿದ್ದೇನೆ. ಮಾನ್ಯ ಚಂದ್ರಣ್ಣನವರು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ನಾಗೇಗೌಡರು ಉತ್ತರ ಕೊಡುವ ಕಾಲದಲ್ಲಿ ನೇತ್ರಾವತಿ ನೀರನ್ನು ಹೇಮಾವತಿ ನೀರಿಗೆ ನಾವು ವರ್ಗಾವಣೆ ಮಾಡಿಕೊಂಡು, ಉಳಿಕೆ ಒಂದು ಲಕ್ಷ 20 ಸಾವಿರ ಹೆಕ್ಟೇರ್‌ಗೆ ನೀರನ್ನು ಒದಗಿಸುತ್ತೇವೆಂದು ಅವರು ಹೇಳಿದಾಗ, ನಾನು ಅದಕ್ಕೆ ಪ್ರತಿಯಾಗಿ ಆಗುವುದಿಲ್ಲವೆಂದು ಹೇಳಿದೆ. ನೇತ್ರಾವತಿ ನದಿ ನೀರಿಗೆ ಬೇರೆ ಯೋಜನೆ ಆರಂಭವಾಗಿದ್ದು, ಆ ಯೋಜನೆಯನ್ನು ಅನುಷ್ಠಾನ ಮಾಡಬೇಕೆಂದು ಈ ಸಭೆಯಲ್ಲಿ ಮಾತನಾಡಿದ್ದೇನೆ. ಇದಕ್ಕೆ ಒಂದು ತಾಂತ್ರಿಕ ಸಮಿತಿಯನ್ನು ಮಾಡಿ, ಆ ಸಮಿತಿ ಮುಂದೆ ಈ ವಿಷಯವನ್ನು ರೆಫರ್ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದರು. ತಾವು ದಾಖಲೆಗಳನ್ನು ತೆಗೆಸಿ ನೋಡಬೇಕು. ಹೇಮಾವತಿ ನೀರು ಎಲ್ಲಿಗೆ ಹೋಗುವುದಿಲ್ಲವೋ ಆ ಭಾಗವನ್ನು ಬಿಟ್ಟು, ಹೇಮಾವತಿ ಎಡ ಭಾಗದಲ್ಲಿ ಯಾರಿಗೆ ನೀರು ಸಿಗುತ್ತಿಲ್ಲ ಆ ಭಾಗಕ್ಕೆ ನೇತ್ರಾವತಿ ಯೋಜನೆ ಇದೆ ಎಂದು ನಾವು ಮತ್ತು ತುಮಕೂರು ಜಿಲ್ಲೆಯ ಜನರು ತಿಳಿದುಕೊಂಡಿದ್ದಾರೆ. ಪತ್ರಿಕೆಯಲ್ಲಿ ನೇತ್ರಾವತಿ ನೀರನ್ನು ಹೇಮಾವತಿಗೆ ಡೈವರ್ಟ್ ಮಾಡಲಿಕ್ಕೆ ಪಕ್ಷೇತರ ಸದಸ್ಯರೇ ಸಲಹೆಯನ್ನು ಕೊಟ್ಟರು ಎಂದು ಬಂದಿದೆ. ಇದು ತಿದ್ದುಪಡಿಯಾಗಬೇಕು. ಇದೊಂದು ಕ್ಲಾರಿಫೈ ಆಗಬೇಕು.

ಶ್ರೀ ಕೆ. ಎಸ್. ನಾಗೇಗೌಡ (ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನಾವು ಈಗಾಗಲೇ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ. ನೇತ್ರಾವತಿ ಹಾಗೂ ಕಾವೇರಿ ಬೇಸಿನ್ ಡೆಫಿಸಿಟ್ : ಬೇಸಿನ್ ಇರುವುದರಿಂದ ನೇತ್ರಾವತಿ ನೀರನ್ನು ಡೈವರ್ಷನ್ ಮಾಡಿ ತುಮಕೂರು ಜಿಲ್ಲೆಗೆ ಹೆಚ್ಚಿಗೆ ಸಹಾಯವಾಗುವಂತಹ ರೀತಿಯಲ್ಲಿ ಮಾಡಬೇಕೆನ್ನುವ ಉದ್ದೇಶವಿದೆ. ನಾನು ನಿನ್ನೆಯ ದಿವಸ ಆ ಉದ್ದೇಶದಿಂದ ನಮ್ಮ ಜಯಣ್ಣನವರು ದೇವನಹಳ್ಳಿ ಬಗ್ಗೆ ಕೇಳಿದಾಗ ತುಮಕೂರಿನಲ್ಲಿ ರತಕ್ಕಂತಹ 3,30,000 ಎಕರೆಗೆ ಸ್ಪೆಬಲೈಸ್ ಮಾಡಬೇಕಾಗುತ್ತದೆ. ಅದು ಡೆಫಿಸಿಟ್ ಬೇಸಿನ್ ಇದೆ. ಆ ಜಿಲ್ಲೆಗೆ ನಾವು ಹೆಚ್ಚು ನೀರನ್ನು ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ನಾವು ನೇತ್ರಾವತಿ ನೀರನ್ನು ಡೈವರ್ಷನ್ ಮಾಡಿ ಹೇಮಾವತಿ ನೀರಿಗೆ ಸೇರಿಸಿರತಕ್ಕಂಥದ್ದು ಎನ್ನುವ ಮಾತಿಗೆ ಪರಿಶೀಲನೆ ಮಾಡುವುದಕ್ಕೆ ಅದು ಫೀಸಿಬಿಲಿಟಿ ಯಾವ ರೀತಿ ಇದೆ. ಟೆಕ್ನಿಕಲ್ ಫೀಸಿಬಿಲಿಟಿ ಆಗಿದೆಯೇ, ಇಲ್ಲವೇ ಎಂಬುದನ್ನು ನೋಡುವುದಕ್ಕೋಸ್ಕರ ಒಂದು ತಾಂತ್ರಿಕ ಸಮಿತಿಯನ್ನು ನೇಮಿಸುತ್ತೇನೆ ಎಂದು ಹೇಳಿದ್ದರಲ್ಲಿ ಕೆಲವು ಪತ್ರಿಕೆಗಳಲ್ಲಿ ತಪ್ಪಾಗಿ ಬಂದಿದೆ. ಆದರೆ ಕನ್ನಡಪ್ರಭಾ ದಿನಪತ್ರಿಕೆಯಲ್ಲಿ ಸರಿಯಾಗಿ ಬಂದಿದೆ. ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವಾಗ ಇದರ ಬಗ್ಗೆ ವ್ಯತ್ಯಾಸವಾಗುತ್ತದೆ. ಇದರ ಬಗ್ಗೆ ನಾನು ಮತ್ತೊಂದು ಸಾರಿ ಕ್ಲಾರಿಫೈ ಮಾಡುತ್ತೇನೆ. ನೇತ್ರಾವತಿ ನದಿಯ ನೀರನ್ನು ಡೈವರ್ಷನ್ ಮಾಡಿ ಹೇಮಾವತಿ ನದಿಗೆ ಸೇರಿಸುವುದಕ್ಕೆ ಒಂದು ತಾಂತ್ರಿಕ ಸಮಿತಿಯನ್ನು ರಚನೆ ಮಾಡಿ ಅದರ ಫೀಸಿಬಿಲಿಟಿಯ ಬಗ್ಗೆ ವಿಮರ್ಶೆ ಮಾಡುವುದಕ್ಕೋಸ್ಕರ ಆ ಸಮಿತಿಯನ್ನು ಮಾಡಿದ್ದೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಇಲ್ಲೇ ನನ್ನ ಪ್ರಶ್ನೆ ಬಂದಿರುವುದು.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ತಾವು ಉತ್ತರ ಕೊಟ್ಟಿರುವುದೇನೆಂದರೆ, ಎಲ್ಲಿ ಕಾವೇರಿ ಬೇಸಿನ್ ಇದೆ, ಅಲ್ಲಿ ನೀರು ಕಡಿಮೆ ಬಿದ್ದಂತಹ ಸಂದರ್ಭದಲ್ಲಿ ನೇತ್ರಾವತಿಗೆ ನೀರು ಕೊಡುವುದು ಎಂದು ಅರ್ಥ ಬರುತ್ತದೆ. ಅದರಲ್ಲಿ ತಾವು ತುಮಕೂರು ಜಿಲ್ಲೆಗೂ ಕೋಡುತ್ತೇವೆಂದು ಹೇಳುತ್ತೀರಿ. ಆದರೆ ತುಮಕೂರು ಜಿಲ್ಲೆಯಲ್ಲಿ ಕಾವೇರಿ ಮತ್ತು ಕೃಷ್ಣಾ ಬೇಸಿನ್ ಎಂದು ಎರಡು ಬರುತ್ತದೆ. ನಿಮ್ಮ ಅಂದಾಜಿನ ಪ್ರಕಾರ ಕೃಷ್ಣಾ ಬೇಸಿನ್‌ಗೆ ಹೆಚ್ಚು ನೀರು ಬರುತ್ತದೆ. ತಾವು ಏನು ಮೆಸೇಜ್‌ನ್ನು ಕೊಟ್ಟಿದ್ದೀರಿ, ಅದನ್ನು ಕ್ಲಾರಿಫೈ ಮಾಡುವಂತಹ ಸಂದರ್ಭದಲ್ಲಿ ಪುನಃ ಇದರ ಬಗ್ಗೆ ತಪ್ಪು ಸಂದೇಶಗಳು ಹೋಗುವುದು ಬೇಡ. ದಯಮಾಡಿ ಟೆಕ್ನಿಕಲ್ ಕಮಿಟಿಯವರು ಕುಳಿತು ನೀರನ್ನು ಎಲ್ಲಿಗೆ ಕೊಡುವುದಕ್ಕೆ ಸಾಧ್ಯವಿದೆಯೋ ಕೃಷ್ಣಾ ಬೇಸಿನ್‌ಗೆ ಕೊಡಬೇಕೋ ಅಥವಾ ಕಾವೇರಿ ಬೇಸಿನ್‌ಗೆ ಕೊಡಬೇಕೋ ಪ್ರಶ್ನೆ ಇಲ್ಲ. ನಾವು ಈಗ ಸಧ್ಯಕ್ಕೆ ಬೇಸಿನ್ ಪ್ರಶ್ನೆಯನ್ನು ತೆಗೆದುಕೊಳ್ಳುವುದು ಬೇಡ. ತಾವು ದಯಮಾಡಿ ಸರ್ಕಾರದಿಂದ ಉತ್ತರವನ್ನು ಸೀಮಿತವಾಗಿ, ನಿರ್ದಿಷ್ಟವಾಗಿ ಇಂತಹ ಬೇಸಿನ್‌ಗೆ ನೀರನ್ನು ಕೊಡುತ್ತೇವೆ ಎಂಬ ಬಗ್ಗೆ ಮೆಸೇಜ್ ಹೋಗುವುದು ಬೇಡ. ಇದರ ಬಗ್ಗೆ ತಾವು ದಯಮಾಡಿ ಹೇಳಬೇಕು. ತುಮಕೂರು ಜಿಲ್ಲೆಯಲ್ಲಿ ಕೃಷ್ಣಾ ಬೇಸಿನ್ ಅಥವಾ ಕಾವೇರಿ ಬೇಸಿನ್ ಆಗಬಹುದು ನಾವು ಎಲ್ಲಿಗಾದರೂ ನೀರನ್ನು ಕೊಡುವುದಕ್ಕೆ ಬದ್ಧರಾಗಿದ್ದೇವೆ ಎನ್ನುವ ವರ್ತಮಾನ ಹೋಗಬೇಕಾಗಿದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಅಧ್ಯಕ್ಷರೇ, That is not what I have raised. ನಾನು ರೈಸ್ ಮಾಡಿರುವುದಕ್ಕೂ ಇದಕ್ಕೂ ಸಂಬಂಧವಿಲ್ಲ. ನಾನು ಮಾನ್ಯ ನಾಗೇಗೌಡರನ್ನು ಕೇಳಿಕೊಂಡಿರುವುದು it has to be rectified in the records. ನೀವು ಅದನ್ನು ಹೇಮಾವತಿಗೆ ಡೈವರ್ಟ್ ಮಾಡಬಾರದು. ನೇತ್ರಾವತಿಯ ಬಗ್ಗೆ ಅಲಾಯಿದ ಸ್ಕೀಮ್ ಏನಾಗಿದೆ. ಹೇಮಾವತಿಯ ಎಡಭಾಗಕ್ಕೆ ಯಾರಿಗೂ ನೀರಿಲ್ಲ, ಆ ಕಡೆಗೆ ನೇತ್ರಾವತಿಯ ನೀರನ್ನು ಕೊಡುವುದಕ್ಕೆ ತಾವು ಈಗ ಒಂದು ಸರ್ವೆಯನ್ನು ಮಾಡಿಸಿದ್ದೀರಿ. ಆ ಕಾರ್ಯಕ್ರಮವನ್ನು ತಾವು ಮಾಡಿಕೊಡುತ್ತೀರಾ ಎಂದು ನಾನು ಕೇಳುತ್ತಿರುವುದು. ಆದರೆ ಪತ್ರಿಕೆಗಳಲ್ಲಿ ನಾನೇ ಹೇಮಾವತಿಗೆ ನೀರನ್ನು ಡಂಪ್ ಮಾಡುವುದಕ್ಕೆ ಸಲಹೆಯನ್ನು ಕೊಟ್ಟಿದ್ದೇನೆಂದು ಪ್ರಕಟವಾಗಿದೆ. ಇದರಿಂದ ತುಮಕೂರು ಜಿಲ್ಲೆಯವರಿಗೆ ಭಾರಿ ಆಘಾತವಾಗುತ್ತದೆ. ಇದರಲ್ಲಿ ನನ್ನ ಸ್ಟ್ಯಾಂಡ್ ಇಷ್ಟೆ, ತಾವು ನೇತ್ರಾವತಿ ನೀರನ್ನು ಕೊಡುತ್ತೇನೆಂದು ಹೇಳಿದ್ದೀರಿ, ಅದನ್ನು ಕೊಡಬಾರದು. ನಿಮ್ಮದು ಹೇಮಾವತಿಯ ಎಡಭಾಗದ ಏರಿಯಾ ಯಾವುದು ಇಲ್ಲ, ಅಲ್ಲಿಗೆ ಈಗಾಗಲೇ ನೇತ್ರಾವತಿಯ ಯೋಜನೆಯನ್ನು ಅನುಷ್ಠಾನಕ್ಕೆ ತರುವುದಕ್ಕೆ ನಕ್ಷೆ ತಯಾರಾಗಿದೆ. ಆ ಭಾಗಕ್ಕೆ ತಾವು ನೇತ್ರಾವತಿಯ ನೀರನ್ನು ಕೊಡಿ ಎಂದು ನಾನು ಕೇಳಿರುವುದು ಸರಿಯೋ ಅಥವಾ ಅಲ್ಲವೋ ಎಂಬ ಬಗ್ಗೆ ನನಗೆ ಅಷ್ಟೇ ಕ್ಲಾರಿಫೈ ಆಗಬೇಕಾಗಿದೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರಲ್ಲಿ ನನ್ನ ಒಂದು ಸಲಹೆ ಏನೆಂದರೆ, ಈಗಾಗಲೇ ತುಮಕೂರು ಜಿಲ್ಲೆಯಲ್ಲಿ ನೇತ್ರಾವತಿಗೋಸ್ಕರವಾಗಿ ಏನು ಹೋರಾಟ ನಡೆಯುತ್ತಿದೆ, ಅದು ತುಮಕೂರು ಜಿಲ್ಲೆಯಲ್ಲಿ ಹೇಮಾವತಿಯ ನೀರನ್ನು ಎಲ್ಲೆಲ್ಲಿಗೆ ಕೊಡುವುದಕ್ಕಾಗುವುದಿಲ್ಲ, ಆ ಭಾಗಕ್ಕೆ ನೇತ್ರಾವತಿಯ ನೀರು; ಮಧುಗಿರಿ, ಕೊರಟಗೆರೆ ಮತ್ತು ಕೋಲಾರ

ಜಿಲ್ಲೆಗಳಲ್ಲೂ ಕೂಡ ಬರುತ್ತಿಲ್ಲ. ತುಮಕೂರು ಜಿಲ್ಲೆಯ ಬಹಳಷ್ಟು ಪ್ರದೇಶಗಳಿಗೆ ಇವತ್ತು ಹೇಮಾವತಿ ನದಿಯ ನೀರು ಬರುತ್ತಿಲ್ಲ. ಇವತ್ತು ಡ್ರೈಲ್ಯಾಂಡ್‌ಗೆ 187ನೇ ಕಿ.ಮಿ.ಗೆ ಏನು ಕಾಮಗಾರಿಯನ್ನು ಮಾಡುತ್ತೇವೆಂದು ತಾವು ಹೇಳಿದ್ದೀರಿ. ಅಲ್ಲಿಗೂ ಕೂಡ ಸಾಕಷ್ಟು ನಿರೀಕ್ಷಿತ ಪ್ರಮಾಣದಲ್ಲಿ ಹೇಮಾವತಿಯ ನೀರು ಬರುತ್ತಿಲ್ಲ. ನಮ್ಮ ಸ್ನೇಹಿತರಾದ ಮಾನ್ಯ ರುಕ್ಮಯ್ಯಪೂಜಾರಿಯವರು ಇವತ್ತು ನೇತ್ರಾವತಿಯಿಂದ ನಮಗೇ ಸಾಕಾಗುವುದಿಲ್ಲ ಎಂದು ಹೇಳಿದ್ದಾರೆ. ಬಹುಶಃ ಇದು ಪೇಪರಿನಲ್ಲಿ ಬಂದಿರುವ ವಿಷಯವಾಗಿದೆ. ನೇತ್ರಾವತಿ ನದಿಯ ನೀರು ಸಾಕಷ್ಟು ಸಮುದ್ರಕ್ಕೆ ಹೋಗಿ ಬೀಳುತ್ತಿದೆ. ಆದ್ದರಿಂದ ಈ ನದಿಯ ನೀರನ್ನು ಡೈವರ್ಷನ್ ಮಾಡಿಕೊಂಡು ಆ ನದಿಯ ನೀರನ್ನು ತುಮಕೂರು ಜಿಲ್ಲೆಯಲ್ಲಿ ಎಲ್ಲೆಲ್ಲಿ ನೀರು ಬರುತ್ತಿಲ್ಲ, ಆ ಪ್ರದೇಶಕ್ಕೆ ಈ ನೀರನ್ನು ಉಪಯೋಗಿಸಿಕೊಳ್ಳತಕ್ಕಂತಹ ಪ್ರಯತ್ನದಲ್ಲಿ ಮಾನ್ಯ ಸಚಿವರು ದಯಮಾಡಿ ಬರಬೇಕು.

(ಗೊಂದಲ)

ಉಪಾಧ್ಯಕ್ಷರು : ಈ ತರಹ ಮಾತನಾಡಿದರೆ ಅದು ರೇಕಾರ್ಡಿಗೆ ಹೋಗುವುದಿಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ. ತಾವು ಈ ತರಹ ಮಾಡಬಾರದು.

SRI J. C. MADHUSWAMY : We are not reopening the reply given by the Hon'ble Minister yesterday.

ಮಂತ್ರಿಗಳು ನಿನ್ನೆ ಹೇಳಿರುವ ಉತ್ತರವನ್ನು ರೀ ಓಪನ್ ಮಾಡಿ ಎಂದು ನಾನು ತಮಗೆ ನೋಟೀಸ್‌ನ್ನು ಕೊಟ್ಟಿಲ್ಲ. ನನ್ನ ಅಭಿಪ್ರಾಯದ ವಿರುದ್ಧವಾಗಿ ಅಕಸ್ಮಾತ್ ಪೇಪರ್‌ನಲ್ಲಿ ಬಂದಿರುವುದರಿಂದ ತಾವು ಕ್ಲಾರಿಫೈ ಮಾಡಬೇಕೆಂದು ಅಷ್ಟೇ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿರುವುದು. ಅವರು ನಿನ್ನೆಯ ದಿನ ಉತ್ತರವನ್ನು ಹೇಳಿದ್ದಾರೆ ಅದು ಮುಗಿದುಹೋಗಿದೆ. ಅವರು ಹೇಳಿರುವ ವಿಚಾರ ತಪ್ಪೋ ಅಥವಾ ಸರಿಯೋ ಎಂದು ನಾನು ಹೇಳುತ್ತಿಲ್ಲ. ನಾನು ಅವರಲ್ಲಿ ವಿನಂತಿ ಮಾಡಿದ್ದು ನೇತ್ರಾವತಿ ಸೆಫರೇಟ್ ಸ್ಕೀಂ ಆಗಬೇಕು. ತಾವು ರೆಕಾರ್ಡ್ಸ್‌ನ್ನು ತೆಗೆಸಬೇಕು. ಈ ಸಭೆಗೆ ಒಂದು ನಿಯಮವಿದೆ. ನನ್ನ ಹೆಸರು ಬಂದಿದೆ. ನಾನು ಮಿಸ್‌ಕೋಟೆಡ್ ಇನ್ ದಿ ಪ್ರೆಸ್ ಎಂದು ನೋಟೀಸ್‌ನ್ನು ಕೊಟ್ಟರೆ ಬೇರೆ ಏನು ವಿಷಯವನ್ನು ಚರ್ಚೆ ಮಾಡುತ್ತಾ ಕುಳಿತರೆ ಇದರಲ್ಲಿ ನನ್ನ ಹಕ್ಕು ಏನಾಗಬೇಕು. I have been mis-quoted in the Press. Therefore,I have given a notice to the Hon'ble Chair.

ನಾನು ಮಾತನಾಡಿರುವುದೇ ಬೇರೆ, ಪತ್ರಿಕೆಯಲ್ಲಿ ಬಂದಿರುವ ವಿಷಯವೇ ಬೇರೆ, ಇದರಿಂದ ಪಬ್ಲಿಕ್ ಓಪಿನಿಯನ್ ನನ್ನ ಮೇಲೆ ಏನು ಕ್ಯಾಸ್ಟ್ ಆಗುತ್ತದೆ, ಇದರಿಂದ ನನ್ನ ಮೇಲೆ ಏನು ದುಷ್ಪರಿಣಾಮ ಬೀರುತ್ತದೆ? ತಾವು ಅದನ್ನು ಕ್ಲಾರಿಫೈ ಮಾಡಿದರೆ ಸಾಕು.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಏನು ಹೇಳುತ್ತಿದ್ದಾರೆಂದರೆ ಅವರ ಸ್ಟ್ಯಾಂಡ್ ಬಗ್ಗೆ ಅವರು ಕ್ಲಾರಿಫೈ ಮಾಡುತ್ತಿದ್ದಾರೆ. ಬಹುಶಃ ಅವರು ಈ ದಿನ ಕ್ಲಾರಿಫೈ ಮಾಡಿರುವುದರಿಂದ ಅದು ಪತ್ರಿಕೆಯಲ್ಲಿ ಬರುತ್ತದೆ. ನಾಳೇ ಅವರ ಸ್ಟ್ಯಾಂಡ್ ಕ್ಲಿಯರ್ ಆಗುತ್ತದೆ. ಮಾನ್ಯ ಉಪನಾಯಕರಾದ ಶ್ರೀ ಜಯಚಂದ್ರರವರು ಹೇಳಿರುವ ವಿಚಾರದಲ್ಲಿ ಬೇಸಿನ್ ಟು ಬೇಸಿನ್ ವಿಚಾರದಲ್ಲಿ, ನಾನು ಕೃಷ್ಣಾ ಬೇಸಿನ್ ವಿಚಾರದ ಬಗ್ಗೆ ಮಾತನಾಡಲೇ ಇಲ್ಲ. ತಾವು

ದಯವಿಟ್ಟು ಒಂದು ಮಾತನ್ನು ತಿಳಿದುಕೊಳ್ಳಬೇಕು. ಕಾವೇರಿ ಬೇಸಿನ್ ಡೆಫಿಸಿಟ್ ಬೇಸಿನ್, ಅಲ್ಲಿ ನೀರಿನ ಕೊರತೆ ಇದೆ. ಇವತ್ತು ಹೇಮಾವತಿ ನೀರಿನ ಕೊರತೆ ಇದೆ. ಕೆ.ಆರ್.ಎಸ್. ಮತ್ತು ಹಾರಂಗಿಯಲ್ಲಿ ನೀರಿನ ಕೊರತೆ ಇದೆ. ಯಗಚಿ ಹಾಗೂ ಕಬಿನಿಯಲ್ಲಿ ನೀರಿನ ಕೊರತೆ ಇದೆ. ಅರ್ಕಾವತಿ ಮತ್ತು ಇಗ್ಗಲೂರಿನಲ್ಲಿ ನೀರಿನ ಕೊರತೆ ಇದೆ. ಎಲ್ಲಾ ಪ್ರದೇಶಗಳಲ್ಲಿ ನೀರಿನ ಕೊರತೆ ಇರುವಂತಹ ಕಾವೇರಿ ಬೇಸಿನ್‌ಗೆ ನೇತ್ರಾವತಿ ಬೇಸಿನ್‌ನ್ನು ಜಾಯಿನ್ ಮಾಡಿದರೆ ಎಷ್ಟು ಪ್ರಯೋಜನವಾಗುತ್ತದೆ ಎಂಬ ಬಗ್ಗೆ ಫೀಸಿಬಿಲಿಟಿ ಸ್ಟಡಿ ಮಾಡುವುದಕ್ಕೆ ಮಾತ್ರ. ಆ ತಾಂತ್ರಿಕದಲ್ಲಿ ಅದು ಯೋಗ್ಯವಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಒಂದು ಫೀಸಿಬಿಲಿಟಿ ಸ್ಟಡಿ ಮಾಡಿ ಡೀಟೈಲ್ ಆಗಿ ಇನ್‌ವೆಸ್ಟಿಗೇಟ್ ಮಾಡಿ ಒಂದು ರಿಪೋರ್ಟ್‌ನ್ನು ಸರ್ಕಾರಕ್ಕೆ ಕೊಡಬೇಕು. ಇದರ ಬಗ್ಗೆ ಸರ್ಕಾರ ಮುಂದಿನ ಕ್ರಮ ಏನು ತೆಗೆದುಕೊಳ್ಳಬೇಕು. ಕಾವೇರಿ ಪ್ರಾಧಿಕಾರದಲ್ಲಿ ಮಾತನಾಡಬೇಕೇ ಅಥವಾ ಇಲ್ಲಾ ಇದರ ಬಗ್ಗೆ ಯಾರ ಜೊತೆಯಲ್ಲಿ ಮಾತನಾಡಬೇಕು. ಇದರ ಬಗ್ಗೆ ಯಾರು ತೆಗೆದುಕೊಳ್ಳಬೇಕೆಂಬ ಬಗ್ಗೆ ಬಹಳ ವರ್ಷಗಳ ಹಿಂದೆ ಇದನ್ನು ಮಾಡಿದ್ದಾರೆ. ಈಗ ಲೇಟೆಸ್ಟ್ ಆಗಿ ಮಳೆಗಳಲ್ಲಿ ಬಹಳ ವ್ಯತ್ಯಾಸವಿರುವುದರಿಂದ..... ಮಾನ್ಯ ಶಿವನಂಜಪ್ಪನವರೇ, ದಯವಿಟ್ಟು ನನ್ನ ಮಾತನ್ನು ಮೊದಲು ಕೇಳಿ.

(ಗೊಂದಲ)

ಶ್ರೀ ಜಿ. ಎಸ್. ಶಿವನಂಜಪ್ಪ : ಮಾನ್ಯ ಮಾಧುಸ್ವಾಮಿಯವರು ನಿನ್ನೆ ದಿವಸ ಮಾತನಾಡಿರುವ ವಿಚಾರ ಮಿಸ್‌ಲೀಡಿಂಗ್ ಆಗಿದೆ. ಅದನ್ನು ರೆಕ್ಟಿಫೈ ಮಾಡಿ ಎಂದು ಹೇಳಿದ್ದಾರೆ. ಅವರು ಹೊಸದಾಗಿ ಕೇಳುತ್ತಿದ್ದಾರೆ ಎಂದು ತಾವು ಹೇಳುತ್ತಿರಲ್ಲಾ. ತಾವು ಇಂಡಿಪೆಂಡೆಂಟ್ ಆಗಿ ಹೇಳುತ್ತಿರುವುದು.

ಮಾನ್ಯ ಸದಸ್ಯರು : ನೇತ್ರಾವತಿ ನೀರು ಇಂಡಿಪೆಂಡೆಂಟ್ ಆಗಿ ಕೋಲಾರ ಜಿಲ್ಲೆಗೆ ಬರುವುದರಲ್ಲಿದೆ. ಅದನ್ನು ಅವರು ಜಾರಿಗೆ ತನ್ನಿ ಎಂದು ಹೊಸದಾಗಿ ಕೇಳುತ್ತಿದ್ದಾರೆ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಮಾಧುಸ್ವಾಮಿಯವರು ಪತ್ರಿಕೆಯಲ್ಲಿ ಬಂದಿರುವ ವಿಚಾರದ ಬಗ್ಗೆ ಕ್ಲಾರಿಫೈ ಮಾಡಿದ್ದಾರೆ. ಅದು ಸರಿ ಹೋಗುತ್ತದೆ. ನಾನು ಹೊಸ ವಿಚಾರದ ಬಗ್ಗೆ ಆಲೋಚನೆ ಮಾಡುವಂತಹ ಸಂದರ್ಭದಲ್ಲಿ ಎಲ್ಲೆಲ್ಲಿ ನೀರಿನ ಕೊರತೆ ಇದೆ, ಯಾವ ಯಾವ ಭಾಗದಲ್ಲಿ ನೀರಿನ ಕೊರತೆ ಇದೆ. ಎಲ್ಲಿ ನಾವು ಹಣವನ್ನು ಹೂಡಿದ್ದೇವೆ, ಅದರಲ್ಲೂ ವಿಶೇಷವಾಗಿ ತುಮಕೂರು ಜಿಲ್ಲೆಯ ರೈತರಿಗೆ ಆ ಭಾಗಕ್ಕೆ ಬೇಸಿನ್‌ನಲ್ಲಿ ಮಾಡಿಕೊಡುವುದಕ್ಕೆ ಒಂದು ಫೀಸಿಬಿಲಿಟಿ ರಿಪೋರ್ಟ್‌ನ್ನು ತರಿಸಿಕೊಡುತ್ತೇವೆಂದು ಹೇಳುವುದಕ್ಕೆ ನಮ್ಮೂರಿಗೆ ಕೊಡಿ, ನಮ್ಮೂರಿಗೆ ಕೊಡಿ ಎಂದು ಹೇಳುವುದಲ್ಲ. ಈ ವಿಷಯದ ಬಗ್ಗೆ ತಾಂತ್ರಿಕ ಸಮಿತಿಯನ್ನು ರಚನೆ ಮಾಡುತ್ತೇವೆ.

ಆ) ನಿಪ್ಪಾಣಿ ಕ್ಷೇತ್ರಕ್ಕೆ ಮಹಾರಾಷ್ಟ್ರದ ವೇದಗಂಗಾ ನದಿಯಿಂದ ನೀರು ಸರಬರಾಜು

ಶ್ರೀ ಸುಭಾಷ ಶ್ರೀಧರ್ ಜೋಷಿ (ನಿಪ್ಪಾಣಿ) : ಮಾನ್ಯ ಉಪಾಧ್ಯಕ್ಷರೆ, ನಮ್ಮ ಕ್ಷೇತ್ರಕ್ಕೆ ಮಹಾರಾಷ್ಟ್ರದ ವೇದಗಂಗಾ ನದಿಯಿಂದ ನೀರು ಬರಬೇಕು. ಇದರ ಬಗ್ಗೆ ನಾನು ಕಳೆದ 5 ವರ್ಷದಿಂದ ಒತ್ತಾಯ ಮಾಡುತ್ತಿದ್ದೇನೆ; ಆದರೂ ಸಹ ಈ ಸರ್ಕಾರ ಏನು ಮಾಡಿಲ್ಲ. ನಮ್ಮ ಕ್ಷೇತ್ರಕ್ಕೆ ಕುಡಿಯುವ ನೀರಿನ ಸಮಸ್ಯೆ ಬಹಳ ತೊಂದರೆಯಾಗಿದೆ ಎಂದು ನಾನು ಈಗಾಗಲೇ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇನೆ. ಮಹಾರಾಷ್ಟ್ರ ಸರ್ಕಾರದ ಜೊತೆ 5 ವರ್ಷದ ಅಗ್ರಿಮೆಂಟ್ ಆಗಬೇಕೆಂದೂ ಹಾಗೂ 26 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲವೆಂದು ಅವರು ಹೇಳಿದ್ದಾರೆ. ಇದರಿಂದಾಗಿ ನಮ್ಮ